# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ–೫೮೬೧೦೫.

## AKKAMAHADEVI WOMEN'S UNIVERSITY,VIJAYAPURA-586105.

(ಹಿಂದಿನ ಪದನಾಮ: ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,ವಿಜಯಪುರ.)


ಕುಲಸಚಿವರು ಕಛೇರಿ | Registrar Office

ಜ್ಞಾನಶಕ್ತಿ ಆವರಣ ತೊರವಿ | Web Site : www.kswu.ac.in | Jnanashakti Campus Torvi

ದೂರವಾಣಿ : 08352-229051/26 | Email: acakswub1@gmail.com | ಫ್ಯಾಕ್ಸ : 08352 – 229057


ನಂ. ಅಮವಿವಿ/ಶೈ.ಸಂ–2/ಅಸೂ/2017–18/2050 ದಿನಾಂಕ:೨೨–೦೯–೨೦೧೭

## <u>ಸಂಯೋಜನಾ ಅಧಿಸೂಚನೆ</u>

### <u>*ಪ್ರಾಂಶುಪಾಲರ ವೈಯಕ್ತಿಕ ಗಮನಕ್ಕಾಗಿ*</u>

**ವಿಷಯ:** ೨೦೧೮–೧೯ ನೇ ಸಾಲಿಗಾಗಿ ಮುಂದುವರಿಕೆ, ವಿಸ್ತರಣೆ, ಶಾಶ್ವತ, ಶಾಶ್ವತ ನವೀಕರಣ ಮತ್ತು ಹೊಸ ಕೋರ್ಸು, ಹೊಸ ವಿಷಯ, ಹೊಸ ಮಹಿಳಾ ಕಾಲೇಜು ಮತ್ತು ಹೊಸ ಸ್ನಾತಕೋತ್ತರ ಕೋರ್ಸುಗಳ ಸಂಲಗ್ನತೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವ ಕುರಿತು.

**ಉಲ್ಲೇಖ:**೧) ಕರ್ನಾಟಕ ರಾಜ್ಯವಿಶ್ವವಿದ್ಯಾಲಯಗಳ ಅಧಿನಿಯಮ ೨೦೦೦/೫೯(೩)
೨) ಕರ್ನಾಟಕ ರಾಜ್ಯವಿಶ್ವವಿದ್ಯಾಲಯಗಳ ಅಧ್ಯಾದೇಶ ೨೦೦೩.
೩) ಸರ್ಕಾರದ ಪತ್ರ ಸಂಖ್ಯೆ: ಇಡಿ ೧೦೭ ಯುಆರ್‌ಸಿ ೨೦೦೬ ದಿನಾಂಕ:೨೧–೦೮–೨೦೦೬
೪) ಸರ್ಕಾರದ ಪತ್ರ ಸಂಖ್ಯೆ: ಇಡಿ ೭೬ ಯುಬಿವಿ ೨೦೧೧ ದಿನಾಂಕ:೧೭–೦೫–೨೦೧೧
೫) ಸರ್ಕಾರದ ಪತ್ರ ಸಂಖ್ಯೆ: ಇಡಿ ೨೬೨ ಯುಎನ್‌ಇ ೨೦೧೫ ದಿನಾಂಕ:೨೦–೦೬–೨೦೧೫
೬) ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ:೧೬–೦೯–೨೦೧೭

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇದರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧೀನ ಮಹಿಳಾ ಮಹಾವಿದ್ಯಾಲಯಗಳ ಹಾಗೂ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರ ಹಾಗೂ ನೊಂದಾಯಿತ ಸಂಘ ಸಂಸ್ಥೆಗಳ ಗಮನ ಸೆಳೆಯುತ್ತ ಈ ಮೂಲಕ ತಿಳಿಸುವುದೇನೆಂದರೆ ೨೦೧೮–೧೯ ನೇ ಶೈಕ್ಷಣಿಕ ಸಾಲಿಗಾಗಿ ವಿಶ್ವವಿದ್ಯಾಲಯಗಳ ಅಧಿನಿಯಮ–೨೦೦೦ ಪ್ರಕರಣ ೫೯(೩) ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ತಿದ್ದುಪಡಿ ಅಧ್ಯಾದೇಶ–೨೦೦೩ ರ ಮೇರೆಗೆ ೨೦೧೮–೧೯ ನೇ ಸಾಲಿಗಾಗಿ ಮುಂದುವರಿಕೆ, ವಿಸ್ತರಣೆ, ಶಾಶ್ವತ, ಶಾಶ್ವತ ನವೀಕರಣ ಮತ್ತು ಹೊಸ ಕೋರ್ಸು, ಹೊಸ ವಿಷಯ, ಹೊಸ ಮಹಿಳಾ ಕಾಲೇಜು ಮತ್ತು ಸಂಯೋಜಿತ ಮಹಿಳಾ ಮಹಾವಿದ್ಯಾಲಯದಲ್ಲಿ ಹೊಸ ಸ್ನಾತಕೋತ್ತರ ಕೋರ್ಸುಗಳ ಸಂಲಗ್ನತೆ ಮಂಜೂರಾತಿಗಾಗಿ ಸಂಯೋಜನೆ ಅರ್ಜಿಗಳನ್ನು ಕರೆಯಲಾಗಿದೆ. ಅರ್ಜಿ ನಮೂನೆಯನ್ನು ಪಡೆದು ಪೂರ್ಣ ಮಾಹಿತಿಯನ್ನು ಭರ್ತಿ ಮಾಡಿ (ದಾಖಲೆಗಳೊಂದಿಗೆ) **ಆರು ಪ್ರತಿಗಳಲ್ಲಿ** ಬೈಂಡ ಮಾಡಿಸಿ ವಿಶ್ವವಿದ್ಯಾಲಯಕ್ಕೆ ಈ ಕೆಳಗೆ ನಮೂದಿಸಿದ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಸಲ್ಲಿಸಲು ತಿಳಿಸಲಾಗಿದೆ.

1. ದಂಡ ರಹಿತ ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ: ೨೩.೧೦.೨೦೧೭** (ಎಲ್ಲ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳಿಗೆ).
2. **ಬಿ.ಎ., ಬಿ.ಎಸ್ಸಿ., ಬಿ.ಕಾಂ. ಡಿಪ್ಲೋಮಾ ಕೋರ್ಸುಗಳಿಗೆ ರೂ.೧೦,೨೫೦.೦೦ ಮತ್ತು ಬಿ.ಎಸ್ಸಿ. (ಬಯೋಟೆಕ್ನಾಲಾಜಿ, ಹೋಮ ಸೈನ್ಸ್) ಬಿ.ಎಫ್ ಟಿ., ಬಿಎಫ್ಎಂ, ಬಿ.ಎಸ್. ಡಬ್ಲ್ಯೂ, ಬಿ.ಬಿ.ಎ/ಬಿ.ಬಿ.ಎಂ, ಬಿ.ಸಿ.ಎ. (ಬಿ.ಎಡ್ ಮುಂದುವರಿಕೆಗೆ ಮಾತ್ರ),** ಕೋರ್ಸುಗಳಿಗೆ ರೂ. ೨೦,೪೯೦.೦೦ ದಂಡದೊಂದಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : ೩೧.೧೦.೨೦೧೭.
3. **ಎಂ.ಎಸ್ಸಿ ಕೆಮಿಸ್ಟ್ರಿ, ಮೈಕ್ರೋಬಯೋಲಾಜಿ, ಫಿಜಿಕ್ಸ್, ಮ್ಯಾಥಮೆಟಿಕ್ಸ್, ಬಯೋಕೆಮೆಸ್ಟ್ರಿ ಎಂ.ಎ ಕನ್ನಡ, ಇಂಗ್ಲೀಷ, ಹಿಂದಿ, ಉರ್ದು, ಮ್ಯೂಜಿಕ, ಇತಿಹಾಸ, ರಾಜ್ಯಶಾಸ್ತ್ರ ಎಂ.ಕಾಂ ಸ್ನಾತಕೋತ್ತರ ಹಾಗೂ ಎಂಫ್ಎಂ ಡಿಪ್ಲೋಮಾ** ಕೋರ್ಸುಗಳಿಗೆ ರೂ. ೧೬,೯೨೦.೦೦ ದಂಡದೊಂದಿಗೆ ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ :** ೩೧.೧೦.೨೦೧೭.

4. **ಎಂ. ಕಾಂ ಮತ್ತು ಎಂ ಎಸ್ ಡಬ್ಲ್ಯೂ(ಮುಂದುವರಿಕೆಗೆ ಮಾತ್ರ)** ಕೋರ್ಸುಗಳಿಗೆ **ರೂ. ೨೫,೪೧೦.೦೦** ಮತ್ತು **ಎಂ.ಎ ಕನ್ನಡ ಇಂಗ್ಲೀಷ, ಮತ್ತು ಪತ್ರಿಕೋದ್ಯಮ ಮತ್ತು ಸಂಮೂಹ ಸಂವಹನ (ಮುಂದುವರಿಕೆಗೆ ಮಾತ್ರ)** ಕೋರ್ಸುಗಳಿಗೆ **ರೂ.೧೬,೯೨೦.೦೦** ದಂಡದೊಂದಿಗೆ ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ:** ೩೧.೧೦.೨೦೧೭.

**ದಿನಾಂಕ: ೩೧.೧೦.೨೦೧೭** ರ ನಂತರ ಯಾವುದೇ ಕಾರಣಕ್ಕೂ ಅರ್ಜಿ ಪಡೆಯಲು ಅಥವಾ ಸಲ್ಲಿಸಲು ಅವಕಾಶ ಇರುವದಿಲ್ಲ. ಅಂಚೆ ವಿಳಂಬಕ್ಕೆ ವಿಶ್ವವಿದ್ಯಾಲಯ ಜವಾಬ್ದಾರಿಯಲ್ಲ. ಒಂದು ವೇಳೆ ಕೊನೆಯ ದಿನಾಂಕ ಅನಿರೀಕ್ಷಿತವಾಗಿ ರಜೆಯೆಂದು ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನವು ಕೊನೆಯ ದಿನಾಂಕವಾಗಿರುತ್ತದೆ.

**ಸೂಚನೆ : ೨೦೧೮-೧೯ ನೇ ಸಾಲಿನಿಂದ ಸಂಯೋಜನಾ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ಜರುಗಿಸಲು ಸರ್ಕಾರದ ಮಟ್ಟದಲ್ಲಿ ಈಗಾಗಲೆ ಕ್ರಮಕೈಗೊಳ್ಳಲಾಗುತ್ತಿದ್ದು. ಸರ್ಕಾರದಿಂದ ಇದರ ಅನುಷ್ಠಾನಕ್ಕಾಗಿ ಸೂಚನೆ ಬಂದ ಕೂಡಲೇ ಸದರಿ ಅಧಿಸೂಚನೆಯನ್ವಯ ಆರು ಪ್ರತಿಯಲ್ಲಿ ಅರ್ಜಿ ಸಲ್ಲಿಸಿದ್ದರೂ ಸಹ ಎಲ್ಲಾ ಮಹಾವಿದ್ಯಾಲಯದವರು ಮತ್ತೊಮ್ಮೆ ಕಡ್ಡಾಯವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಈ ಕುರಿತು ವಿಶ್ವವಿದ್ಯಾಲಯದಿಂದ ಪ್ರತ್ಯೇಕವಾಗಿ ಸುತ್ತೋಲೆ ಹೊರಡಿಸಲಾಗುವುದು.**

**ಅರ್ಜಿಯ ಜೊತೆಯಲ್ಲಿ ಈ ಕೆಳಗೆ ನಮೂದಿಸಿದ ಮಾಹಿತಿಯ ದಾಖಲೆಗಳನ್ನು ಸಲ್ಲಿಸಬೇಕು :**

1. ಡಿಡಿಯನ್ನು ನಿಗದಿತ ದಿನಾಂಕದಲ್ಲಿ ತೆಗೆಯಿಸಿದ್ದರೂ ಕೂಡಾ ಪ್ರಸ್ತಾವನೆಯನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು ಅಂಚೆ ವಿಳಂಬಕ್ಕೆ ವಿಶ್ವವಿದ್ಯಾಲಯ ಜವಾಬ್ದಾರಿಯಲ್ಲ.
2. ವಿಶ್ವವಿದ್ಯಾಲಯದಿಂದ ವಿಧಿಸಿದ ಷರತ್ತುಗಳು ಹಾಗೂ ಅವುಗಳನ್ನು ಪೂರೈಸಿದ ಬಗ್ಗೆ ದಾಖಲೆಗಳನ್ನು ಸಲ್ಲಿಸಬೇಕು.
3. ಹಿಂದಿನ ವರ್ಷದಲ್ಲಿ ಚಾಲ್ತಿಯಲ್ಲಿದ್ದ ಕೋರ್ಸುಗಳ ಹಾಗೂ ವಿಷಯಗಳ ಪಟ್ಟಿ ಲಗತ್ತಿಸಬೇಕು.
4. ವಿಶ್ವವಿದ್ಯಾಲಯ ನಿಗದಿ ಪಡಿಸಿದ ಪ್ರವೇಶ ಸಂಖ್ಯೆ ಹಾಗೂ ಪ್ರವೇಶ ಪಡೆದವರ ಸಂಖ್ಯೆ ಕೋರ್ಸುವಾರು ವಿವರ ನೀಡುವುದು.
5. ೨೦೧೭-೧೮ ನೇ ಶೈಕ್ಷಣಿಕ ಸಾಲಿನ ಸಂಲಗ್ನತೆ ಮಂಜೂರಾತಿ ಅಧಿಸೂಚನೆ ಪ್ರತಿ ಲಗತ್ತಿಸತಕ್ಕದ್ದು.
6. ಯಾವುದೇ ಹೊಸ ಕೋರ್ಸ, ಭಾಷೆ, ಐಚ್ಛಿಕ ವಿಷಯ, ಹೆಚ್ಚುವರಿ ವಿದ್ಯಾರ್ಥಿ ಪ್ರವೇಶ ಮಿತಿ ಇತ್ಯಾದಿಗಳಿಗೆ ಸಂಯೋಜನೆ ಕೋರಿ ಸಲ್ಲಿಸಲಾಗುವ ಅರ್ಜಿಯಲ್ಲಿಯೇ ವಿವರವನ್ನು ತುಂಬಿ ಸಲ್ಲಿಸಬೇಕು. ಸಮಿತಿ ಭೇಟಿ ನೀಡಿದ ಸಂದರ್ಭದಲ್ಲಿ ಅಥವಾ ನಂತರ ಕೋರಿಕೆ ಸಲ್ಲಿಸಿದಲ್ಲಿ, ಅಂತಹ ಕೋರಿಕೆಯನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಸರ್ಕಾರಿ ಕಾಲೇಜಿನವರು ಯಾವುದೇ ಹೊಸ ಕೋರ್ಸ, ಭಾಷೆ, ಐಚ್ಛಿಕ ವಿಷಯ, ಹೆಚ್ಚುವರಿ ವಿದ್ಯಾರ್ಥಿ ಪ್ರವೇಶ ಮಿತಿ ಇತ್ಯಾದಿಯನ್ನು ಕೋರಿ ಅರ್ಜಿ ಸಲ್ಲಿಸಬೇಕಾದಲ್ಲಿ ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆದಿರಬೇಕು. ಮತ್ತು ಸರ್ಕಾರದಿಂದ ಮಂಜೂರಾದ ಪ್ರತಿಯನ್ನು ಲಗತ್ತಿಸತಕ್ಕದ್ದು. ಇಲ್ಲದಿದ್ದಲ್ಲಿ ಅಂತಹ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.
7. ಸಂಯೋಜನಾ ಅರ್ಜಿಯ ಜೊತೆಯಲ್ಲಿ ಲಗತ್ತಿಸಿದ ಅನುಬಂಧದ ಪ್ರಕಾರ ಎಲ್ಲಾ ಮಾಹಿತಿಗಳನ್ನು ಪೂರೈಸಬೇಕು ಈ ಹೊಣೆ ಸಂಬಂಧಿಸಿದ ಪ್ರಾಂಶುಪಾಲರು/ಸಂಸ್ಥೆಯ/ಸಂಘದ ಆಡಳಿತ ಮಂಡಳಿಗೆ ಸಂಬಂಧಪಟ್ಟಿದೆ.
8. ಚಾಲ್ತಿಯಲ್ಲಿರುವ ವಿಷಯ/ಕೋರ್ಸುಗಳ ವಿವರಗಳನ್ನು ಅರ್ಜಿಯಲ್ಲಿ ತಪ್ಪದೆ ಸರಿಯಾಗಿ ನಮೂದಿಸಬೇಕು. ಒಂದು ವೇಳೆ ಚಾಲ್ತಿಯಲ್ಲಿರುವ ವಿಷಯ/ಕೋರ್ಸುಗಳನ್ನು ಅರ್ಜಿಯಲ್ಲಿ ನಮೂದಿಸದೇ ಇದ್ದಲ್ಲಿ ಅಂತಹ ಕೋರ್ಸು/ವಿಷಯಗಳನ್ನು ಹೊಸ ಕೋರ್ಸು, ವಿಷಯಗಳೆಂದು ಪರಿಗಣಿಸಲಾಗುವುದು. ಮತ್ತು ಅದಕ್ಕೆ ಸಂಬಂಧಪಟ್ಟ ಶುಲ್ಕ ವಿಧಿಸಲಾಗುವುದು.
9. ಹಿಂದಿನ ವರ್ಷದಲ್ಲಿ ಶಾಶ್ವತ ಸಂಯೋಜನೆಗೆ ಅರ್ಜಿಸಲ್ಲಿಸಿ, ಶಾಶ್ವತ ಸಂಯೋಜನೆ ಪಡೆಯದೇ ಇದ್ದಲ್ಲಿ, ಅಂತಹ ಮಹಾವಿದ್ಯಾಲಯಗಳು ಪುನಃ ೨೦೧೮-೧೯ ನೇ ಸಾಲಿಗೆ ಮುಂದುವರಿಕೆ ಸಂಯೋಜನಾ ಅರ್ಜಿ ಸಲ್ಲಿಸಲು ನಿರ್ದೇಶಿಸಲಾಗಿದೆ.
10. ಸರ್ಕಾರದ ಪತ್ರ ಸಂಖ್ಯೆ: ಇಡಿ ೭೬ ಯುಬಿವಿ ೨೦೧೧ ದಿನಾಂಕ:೧೭-೦೫-೨೦೧೧ ರನ್ವಯ ೦೫ ವರ್ಷಗಳ ವರೆಗೆ ಸಂಯೋಜನೆಯನ್ನು ಹೊಂದಿರುವ ಎಲ್ಲ ಮಹಿಳಾ ಮಹಾವಿದ್ಯಾಲಯಗಳು ಉತ್ತಮ ಶೈಕ್ಷಣಿಕ ಗುಣಮಟ್ಟ ಹೊಂದಿರಬೇಕು. ಹಾಗೂ NAAC ದಿಂದ ಕನಿಷ್ಠ C++ ಗ್ರೇಡ ಕಡ್ಡಾಯವಾಗಿ ಪಡೆದಿರಬೇಕು ಎಂದು ನಿರ್ದೇಶನ ನೀಡಲಾಗಿದೆ.

11. ಸರ್ಕಾರದ ನಿಯಮದಂತೆ, ಸರ್ಕಾರಿ ಕಾಲೇಜಿನವರು ಸಂಯೋಜನೆಗಾಗಿ ಯಾವುದೇ ಶುಲ್ಕವನ್ನು ಪಾವತಿಸುವಂತಿಲ್ಲ. ಆದರೆ ನಿಗದಿತ ಸಮಯದಲ್ಲಿ ಸೂಕ್ತ ಅರ್ಜಿಯನ್ನು ಸಂಬಂಧಪಟ್ಟ ಮಾಹಿತಿಯೊಡನೆ ಆರು ಪ್ರತಿಯಲ್ಲಿ ಅರ್ಜಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳೇ ನೇರ ಹೊಣೆಗಾರರಾಗಿರುತ್ತಾರೆ.

12. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳಿಂದ ನಡೆಸುತ್ತಿರುವ ಕಾಲೇಜಿನವರು ನಿಯಮಾನುಸಾರ ಶೇಕಡಾ ೫೦ ರಷ್ಟು ಸಂಯೋಜನಾ ಶುಲ್ಕವನ್ನು ಪಾವತಿ ಮಾಡಲು ತಿಳಿಸಲಾಗಿದೆ. (SC/ST ಸಂಸ್ಥೆಯವರಿಗೆ ಸಂಯೋಜನಾ ಶುಲ್ಕಗಳಲ್ಲಿ ಮಾತ್ರ ಪ್ರತಿಶತ ೫೦% ರಷ್ಟು ರಿಯಾಯತಿ ಇರುತ್ತದೆ). ಅರ್ಜಿ ಶುಲ್ಕ, ಸೇವಾ ಶುಲ್ಕ ಹಾಗೂ ದಂಡ ಶುಲ್ಕದಿಂದ ಇದು ಹೊರತಾಗಿದೆ. ಆದುದರಿಂದ ಅಂತಹ ಕಾಲೇಜಿನವರೂ ಕೂಡ ನಿಗದಿತ ನಮೂನೆಯಲ್ಲಿ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು, ಇಲ್ಲದಿದ್ದರೆ ದಂಡ ಶುಲ್ಕವನ್ನು ಪಾವತಿ ಮಾಡಬೇಕಾಗುತ್ತದೆ.

13. ವಿಶ್ವವಿದ್ಯಾನಿಲಯದಲ್ಲಿ ಅಸ್ತಿತ್ವದಲ್ಲಿರುವ ಹಾಗೂ ಅಧಿಸೂಚನೆಯಲ್ಲಿ ನಮೂದಿಸಿದ ಕೋರ್ಸುಗಳಿಗೆ ಮಾತ್ರ ಅರ್ಜಿಯನ್ನು ಸಲ್ಲಿಸಬೇಕು. ಅಸ್ತಿತ್ವದಲ್ಲಿಲ್ಲದ ಕೋರ್ಸುಗಳಿಗೆ ಅರ್ಜಿಯನ್ನು ಸಲ್ಲಿಸಿದಲ್ಲಿ ಅದನ್ನು ಪರಿಗಣಿಸಲಾಗುವದಿಲ್ಲ.

14. ಪೂರ್ಣ ಮಾಹಿತಿಯನ್ನು ನೀಡದ ಸಂಯೋಜನಾ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

15. ಹಾಲಿ ಮಹಾವಿದ್ಯಾಲಯಗಳು ಹೊಸ ಕೋರ್ಸಿಗಾಗಿ ಪ್ರತ್ಯೇಕ ಅರ್ಜಿ ಪಡೆದು ಸಲ್ಲಿಸಬೇಕು.

16. ಸಂಯೋಜನೆ ಪಡೆದ ಮಹಿಳಾ ಮಹಾವಿದ್ಯಾಲಯವು ಯಾವುದೇ ಕಾರಣಕ್ಕೂ ಬೇರೆ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ/ ಸಂಯೋಜನೆ ಪಡೆಯುವದಿಲ್ಲವೆಂದು ರೂ.೫೦.೦೦ ಗಳ ಮುಖ ಬೆಲೆಯಲ್ಲಿ ಮುಚ್ಚಳಿಕೆ ಪತ್ರ ಸಲ್ಲಿಸುವುದು.

17. a) ಮುಂದುವರಿಕೆ, ವಿಸ್ತರಣೆ, ಹೊಸ ವಿಷಯ,ಸಂಯೋಜನಾ ಅರ್ಜಿ ಶುಲ್ಕ ರೂ: **೬೫೦.೦೦**
    b) ಹೊಸದಾಗಿ ಶಾಶ್ವತ ಸಂಯೋಜನೆ/ ಶಾಶ್ವತ ನವೀಕರಣ ಅರ್ಜಿ ಶುಲ್ಕ ರೂ: **೨,೪೨೦.೦೦**
    c) ಹೊಸ ಕಾಲೇಜು ಅರ್ಜಿ ಶುಲ್ಕ ರೂ : **೨,೮೦೦.೦೦**
    d) ಹೊಸ ಕೋರ್ಸು ಅರ್ಜಿ ಶುಲ್ಕ ರೂ: **೨,೮೦೦.೦೦**
    e) ಹೊಸ ಸ್ನಾತಕೋತ್ತರ ಕೋರ್ಸು ಅರ್ಜಿ ಶುಲ್ಕ ರೂ: **೩,೦೭೦.೦೦**
    f) ಸ್ನಾತಕೋತ್ತರ ಕೋರ್ಸಿನ ಮುಂದುವರಿಕೆ ಸಂಯೋಜನೆ ಅರ್ಜಿ ಶುಲ್ಕ ರೂ. **೨,೮೦೦.೦೦**

ಮೇಲ್ಕಾಣಿಸಿದ ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ www.kswu.ac.in ದಿಂದ ಡೌನಲೋಡ ಮಾಡಿಕೊಂಡು ಸಂಬಂಧಿಸಿದ ಶುಲ್ಕದ ಡಿಡಿ/ಚಲನ್/NEFT ಮುಖಾಂತರ **ಆರ್ಥಿಕ ಅಧಿಕಾರಿಗಳು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.** ಇವರ ಹೆಸರಿನಲ್ಲಿ ಸಂದಾಯವಾಗುವಂತೆ ಸಲ್ಲಿಸುವುದು.( **NEFT A/C No.08632200000959. IFSC Code No. SYNB0000863** ) (ಅಂಚೆಯ ಮೂಲಕ ಅರ್ಜಿ ಪಡೆಯಲು ಇಚ್ಛಿಸುವವರು 5” X 9” ಅಳತೆಯ ಸ್ವವಿಳಾಸದ ಲಕೋಟೆಯ ಮೇಲೆ ರೂ. 80.00 ಮೌಲ್ಯದ ಅಂಚೆ ಚೀಟಿ ಅಂಟಿಸಿ, ಅರ್ಜಿ ಶುಲ್ಕದ ಡಿಡಿ/ಚಲನ್/NEFT ಮುಖಾಂತರ ಲಗತ್ತಿಸಿ, **ಕುಲಸಚಿವರು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ಜ್ಞಾನಶಕ್ತಿ ಆವರಣ, ತೊರವಿ ವಿಜಯಪುರ–೫೮೬೧೦೫** ಇವರಿಗೆ ಕಳುಹಿಸಿ ಪಡೆಯಬಹುದು) ಅಂಚೆಯಲ್ಲಿ ಏನಾದರೂ ವಿಳಂಬವಾದಲ್ಲಿ ಅದಕ್ಕೆ ವಿಶ್ವವಿದ್ಯಾಲಯವು ಜವಾಬ್ದಾರಿ ಇರುವದಿಲ್ಲ.

**ವಿಶೇಷ ಸೂಚನೆ :**

೧) ವಾರ್ಷಿಕ ಶುಲ್ಕದ ಹಣವನ್ನು ಕಡ್ಡಾಯವಾಗಿ ಎಲ್ಲ ಮಹಾವಿದ್ಯಾಲಯಗಳು ಪ್ರತಿ ವರ್ಷ ಪಾವತಿಸಬೇಕು. (ಸರ್ಕಾರಿ ಕಾಲೇಜುಗಳನ್ನು ಹೊರತು ಪಡಿಸಿ)

೨) ಕಲಾ ಮತ್ತು ವಿಜ್ಞಾನ ಪದವಿ ಕೋರ್ಸಿನಲ್ಲಿ ಬೋಧಿಸಲಾಗುತ್ತಿರುವ ಐಚ್ಛಿಕ ವಿಷಯಗಳನ್ನು ಮೂರು ಸಮಾನ ಸಹತ್ವದ ವಿಷಯಗಳ ಗುಂಪುಗಳನ್ನಾಗಿ ವಿಂಗಡಿಸಿ, ಸಂಯೋಜನಾ ಮಂಜೂರಾತಿ ನೀಡಲು ನಿರ್ಧರಿಸಿರುವದರಿಂದ, ಸಂಯೋಜನಾ ಅರ್ಜಿಯಲ್ಲಿ ಸಂಯುಕ್ತಗೊಳಿಸಿ, ಬೋಧಿಸಲಾಗುತ್ತಿರುವ ಐಚ್ಛಿಕ ವಿಷಯಗಳ ಗುಂಪುಗಳ ವಿವರಣೆ ಹಾಗೂ ಪ್ರತಿಯೊಂದು ಗುಂಪುಗಳಿಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ, ಎಲ್ಲವನ್ನು ವಿವರವಾಗಿ ಮತ್ತು ನಿಖರವಾಗಿ ನಮೂದಿಸಬೇಕು. ಹೆಚ್ಚಿನ ಮಾಹಿತಿಗಾಗಿ **ಕುಲಸಚಿವರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ** ಇವರನ್ನು ಸಂಪರ್ಕಿಸುವುದು.

೩) ಈಗಾಗಲೇ ಮಂಜೂರಾದ ಸಂಯೋಜನಾ ಅವಧಿಯು ಮುಗಿದ ನಂತರ, ಅದೇ ಕೋರ್ಸಿನ ವರ್ಗಗಳ ವಿಷಯಗಳಿಗೆ ಮಂಜೂರಾತಿಯನ್ನು ಕೇಳಿಕೊಂಡಲ್ಲಿ, ಅದನ್ನು ಮುಂದುವರಿಕೆ ಸಂಯೋಜನೆ ಎಂದು ಪರಿಗಣಿಸಲಾಗುವುದು.

೪) ಒಮ್ಮೆ ಹೊಸ ಸಂಯೋಜನೆ ಪಡೆದುಕೊಂಡ ನಂತರ ಅದೇ ಕೋರ್ಸಿನ ವಿಷಯಗಳ ವಿಸ್ತರಣೆಗಾಗಿ ಮುಂದುವರಿಕೆ ಸಂಯೋಜನೆ ಶುಲ್ಕದ ಜೊತೆಗೆ ಕೋರ್ಸು ವಿಸ್ತರಣೆ ಶುಲ್ಕ ತುಂಬಬೇಕಾಗುವುದು.

೫) ಪ್ರಸ್ತುತ ಯಾವುದೇ ಕೋರ್ಸಿನಲ್ಲಿ, ಹೊಸ ವಿಷಯ ಪ್ರಾರಂಭಿಸಲು ಅರ್ಜಿ ಸಲ್ಲಿಸಿದಲ್ಲಿ, ಹೊಸ ವಿಷಯದ ನಿಗದಿತ ಶುಲ್ಕ ತುಂಬಬೇಕಾಗುತ್ತದೆ.

೬) ಪಂಚವಾರ್ಷಿಕ ತಪಾಸಣಾ ಅವಧಿ ಪೂರ್ಣ ಗೊಂಡಿರುವ ಮಹಾವಿದ್ಯಾಲಯಗಳು ನವೀಕರಣಕ್ಕಾಗಿ ನಿಗದಿತ ಶುಲ್ಕದೊಂದಿಗೆ ಸಂಯೋಜನಾ ಅರ್ಜಿ ಸಲ್ಲಿಸತಕ್ಕದ್ದು.

೭) ಒಮ್ಮೆ ಸಂದಾಯ ಮಾಡಿದ ಸಂಯೋಜನಾ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಅಥವಾ ಮರುಹೊಂದಾಣಿಕೆ ಮಾಡಲಾಗುವುದಿಲ್ಲ.

೮) ಶಾಶ್ವತ ಸಂಯೋಜನೆ ಇರುವ ಕಾಲೇಜುಗಳು ತಮ್ಮ ಕಾಲೇಜಿಗೆ ಸಂಬಂಧಿಸಿದ ಮಾಹಿತಿಯನ್ನು ನಿಗದಿತ ಶುಲ್ಕದೊಂದಿಗೆ ಸಲ್ಲಿಸಬೇಕು.

೯) ವಿಶ್ವವಿದ್ಯಾಲಯದ ಧನ ಸಹಾಯ ಆಯೋಗ ನವದೆಹಲಿ, ಇವರ ಪತ್ರ ಸಂಖ್ಯೆ: ಡಿವನೊಎಫ್ /೧೧/೨೦೦೫ (Policy) COP ದಿನಾಂಕ:೨೭-೦೪-೨೦೦೬ ರ ಮೇರೆಗೆ UGC Career Oriented ಯೋಜನೆಯಲ್ಲಿ ಪ್ರಾರಂಭಿಸಲಿರುವ ಕೋರ್ಸಗಳಿಗೆ ಸಂಯೋಜನಾ ಶುಲ್ಕ (ವಿಧಿಸಲಾಗುವದಿಲ್ಲ) ಮನ್ನಾ ಮಾಡಲಾಗಿದೆ.

೧೦) ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಿಂದ ಸಂಯೋಜನೆ ಪಡೆದ/ಪಡೆಯುವ ಎಲ್ಲಾ ಮಹಿಳಾ ಮಹಾವಿದ್ಯಾಲಯಗಳು (ಶಾಶ್ವತ ಸಂಯೋಜನೆ ಹೊಂದಿದ ಮಹಾವಿದ್ಯಾಲಯಗಳು ಸಹಿತ) ವಿಶ್ವವಿದ್ಯಾಲಯಕ್ಕೆ ಪಾವತಿ ಮಾಡಬೇಕಾದ ಶುಲ್ಕದ ವಿವರ ಈ ಕೆಳಗಿನಂತಿದೆ.

## <u>ಸಂಲಗ್ನತೆಯ ಶುಲ್ಕ ವಿವರಗಳು (U.G)</u>

| **ಅ** | **ಹೊಸ ಸಂಲಗ್ನತೆಗಾಗಿ** | **ಸಂಯೋಜನಾ ಶುಲ್ಕ ರೂ** |
|---|---|---|
| ೧. | ಕಲಾ | ೮೯,೬೦೦.೦೦ |
| ೨. | ವಿಜ್ಞಾನ | ೮೯,೬೦೦.೦೦ |
| ೩. | ವಾಣಿಜ್ಯ | ೮೯,೬೦೦.೦೦ |
| ೪. | ಬಿ.ಎಸ್ಸಿ (ಬಯೋಟೆಕ್ನಾಲಾಜಿ) | ೮೯,೬೦೦.೦೦ |
| ೫. | ಬಿ.ಎಸ್ಸಿ ಹೋಮಸಾಯಿನ್ಸ | ೮೯,೬೦೦.೦೦ |
| ೬. | ಬ್ಯಾಚಲರ್ ಆಫ್ ಫ್ಯಾಶನ ಟೆಕ್ನಾಲಾಜಿ (BFT) | ೧,೪೯,೮೫೦.೦೦ |
| ೭. | ಬಿ.ಎಸ್.ಡಬ್ಲ್ಯೂ | ೧,೧೫,೨೪೦.೦೦ |
| ೮. | ಬಿ.ಬಿ.ಎ/ ಬಿ.ಬಿ.ಎಂ | ೧,೧೫,೨೪೦.೦೦ |
| ೯. | ಬಿ.ಸಿ.ಎ | ೧,೧೫,೨೪೦.೦೦ |
| ೧೦. | ಬ್ಯಾಚೂಲರ್ ಆಫ್ ಫ್ಯಾಶನ್ ಮ್ಯಾನೇಜಮೆಂಟ (BFM) | ೧,೪೯,೮೫೦.೦೦ |
| ೧೧. | ಅಡ್ವಾನ್ಸ್ ಡಿಪ್ಲೋಮಾ ಇನ್ ಎಪಿರಿಯಲ್ ಪ್ರೊಡ್ಕಶನ್ ಆಂಡ ಮರಚಂಡೈಸ್ (ADAPM) | ೫೦,೦೦೦.೦೦ |
| ೧೨. | ಡಿಪ್ಲೋಮಾ ಇನ್ ಫ್ಯಾಶನ್ ಡಿಸೈನಿಂಗ್ ಆಂಡ ಬೊಟಿಕ್ ಮ್ಯಾನೇಜಮೆಂಟ (DFD&BM) | ೫೦,೦೦೦.೦೦ |

**<u>ಟಿಪ್ಪಣಿ:</u>**

1. ಹೊಸ ಸಂಲಗ್ನತೆ ಎಂದರೆ ೨೦೧೮-೧೯ ನೇ ಶೈಕ್ಷಣಿಕ ಸಾಲಿನಿಂದ ಹೊಸ ಮಹಾವಿದ್ಯಾಲಯ ಪಾರಂಭಿಸಲು ಅಥವಾ ಚಾಲ್ತಿಯಲ್ಲಿರುವ ಮಹಾವಿದ್ಯಾಲಯಗಳಿಗೆ ಮೊದಲನೇಯ ವರ್ಷದಿಂದ ಹೊಸ ಕೋರ್ಸು/ವಿಷಯ ಪ್ರಾರಂಭಿಸಲು ಕೇಳುವ ಪ್ರಸ್ತಾವನೆಯೇ ಹೊಸ ಸಂಲಗ್ನತೆ.
2. ಮುಂದುವರಿಕೆ ಸಂಲಗ್ನತೆ ಎಂದರೆ ಚಾಲ್ತಿಯಲ್ಲಿರುವ ಕಾಲೇಜುಗಳಲ್ಲಿ ಚಾಲ್ತಿಯಲ್ಲಿರುವ ಕೋರ್ಸು/ ವಿಷಯಗಳನ್ನು ಮುಂದುವರೆಸಿಕೊಂಡು ಹೋಗಲು ಕೇಳುವ ಪ್ರಸ್ತಾವನೆಯೇ ಮುಂದುವರಿಕೆ ಸಂಲಗ್ನತೆ.
3. ವಾರ್ಷಿಕ ಶುಲ್ಕವೆಂದರೆ ಚಾಲ್ತಿಯಲ್ಲಿರುವ ಎಲ್ಲಾ ಕಾಲೇಜುಗಳು ಸಂಲಗ್ನತೆಯ ಶುಲ್ಕ ಬಿಟ್ಟು, ಕೊಡುವ ಶುಲ್ಕವೇ ವಾರ್ಷಿಕ ಶುಲ್ಕ.

**<u>ಠೇವಣಾತಿಯ ಷರತ್ತುಗಳು :</u>**

1. ಯಾವುದೇ ಸಂಸ್ಥೆಯು ಕಲಾ, ವಿಜ್ಞಾನ ಕೋರ್ಸಿನ ಕಾಲೇಜುಗಳಲ್ಲಿ ವಾಣಿಜ್ಯ ಕೋರ್ಸುಗಳನ್ನು ಪ್ರಾರಂಭಿಸಲು ಇಷ್ಟಪಟ್ಟಲ್ಲಿ ಅಥವಾ ವಿಷಯದಲ್ಲಿ ಅದಲು ಬದಲು ಮಾಡುವುದಿದ್ದಲ್ಲಿ ಹೆಚ್ಚಿನ ಠೇವಣಿ ಅಗತ್ಯವಿಲ್ಲ. ಅವುಗಳನ್ನು ಒಂದೇ ಘಟಕವೆಂದು ಪರಿಗಣಿಸಲಾಗುವುದು.
2. ಯಾವುದೇ ಸಂಸ್ಥೆಯ ಆಡಳಿತ ಮಂಡಳಿಯವರು ಹೊಸ ಕಾಲೇಜು ಪ್ರಾರಂಭಿಸಲು ಇಷ್ಟಪಟ್ಟಲ್ಲಿ ರೂ. **೩,೨೯,೭೬೦.೦೦** ಗಳನ್ನು ಠೇವಣಿ ಮಾಡಬೇಕು. ಸದರಿ ಠೇವಣಿಯನ್ನು ಇಡದಿದ್ದಲ್ಲಿ ಅದಕ್ಕೆ ತತ್ಸಮಾನವಾದ ಎಂಡೋಮೆಂಟ ಶುಲ್ಕ ರೂ. **೧ ಲಕ್ಷಕ್ಕೆ** ರೂ. **೧೮,೬೮೦.೦೦** ರಂತೆ ಪ್ರತಿ ವರ್ಷ ಸಲ್ಲಿಸಬೇಕಾಗುತ್ತದೆ. ಠೇವಣಿ ಹಣ/ಎಂಡೋಮೆಂಟ ಶುಲ್ಕ ಸಂದಾಯ ಮಾಡಿದ ನಂತರ ಸಂಯೋಜನೆ ಅಧಿಸೂಚನೆ ಹೊರಡಿಸಲಾಗುವುದು. (ಠೇವಣಿ ಹಣ ಎರಡು ವರ್ಷ ಮೂರು ಕಂತಿಗಳಲ್ಲಿ ಸಂದಾಯ ಮಡಲು ಅವಕಾಶವಿದೆ.)

   ಈಗಾಗಲೇ ಮುಂದುವರಿಕೆ ಮತ್ತು ಶಾಶ್ವತ ಸಂಯೋಜನೆಗೆ ಒಳಪಟ್ಟಿರುವ ಮಹಿಳಾ ಮಹಾವಿದ್ಯಾಲಯಗಳು ಭದ್ರತಾ ಠೇವಣಿ ಹಣವನ್ನು ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಈಗಾಗಲೇ ಪಾವತಿಸದಿದ್ದಲ್ಲಿ, ಕೂಡಲೇ ಪಾವತಿಸತಕ್ಕದ್ದು. ಭದ್ರತಾ ಠೇವಣಿ ಹಣವನ್ನು ಆರ್ಥಿಕ ಅಧಿಕಾರಿಗಳ ಹೆಸರಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ಇಡತಕ್ಕದ್ದು.

**<u>ಆ. ಮುಂದುವರಿಕೆ ಸಂಲಗ್ನತೆ ಶುಲ್ಕ:</u>**

**<u>ಆ–೧. ಡಿಪ್ಲೋಮಾ /ಪಿ.ಜಿ.ಡಿಪ್ಲೋಮಾ ಕೋರ್ಸುಗಳಿಗೆ:</u>**

| | |
|---|---|
| ಶಾಶ್ವತಸಂಯೋಜನೆ ಹೊಂದದ ಕೋರ್ಸುಗಳಿಗೆ ವಾರ್ಷಿಕ ಶುಲ್ಕ ಮತ್ತು ಮುಂದುವರಿಕೆ ಶುಲ್ಕ. | ೨೦,೦೦೦.೦೦ |
| ಶಾಶ್ವತ ಸಂಯೋಜನೆ ಹೊಂದಿದ ಕೋರ್ಸುಗಳಿಗೆ ವಾರ್ಷಿಕ ಶುಲ್ಕ | ೧೨,೦೦೦.೦೦ |
| ಐದು ವರ್ಷಕ್ಕೊಮ್ಮೆ ತಪಾಸಣೆ ಮಾಡಲು ಕೊಡಬೇಕಾದ ಶುಲ್ಕ (ಶಾಶ್ವತ ಸಂಯೋಜನೆ ಪಡೆದ ಮಹಾವಿದ್ಯಾಲಯಗಳಿಗೆ) | ೫೦,೦೦೦.೦೦ |

**<u>ಆ–೨. ಶಿಕ್ಷಣ ಮಹಾವಿದ್ಯಾಲಯಗಳಿಗಾಗಿ :</u>**

| | |
|---|---|
| ಶಾಶ್ವತ ಸಂಯೋಜನೆ ಹೊಂದದ ಕೋರ್ಸುಗಳಿಗೆ ವಾರ್ಷಿಕ ಶುಲ್ಕ | ೩೬,೦೩೦.೦೦ |
| ಮುಂದುವರಿಕೆ ಶುಲ್ಕ | ೩೬,೦೩೦.೦೦ |
| ಕೋ ಆರ್ಡಿನೇಶನ್ ಶುಲ್ಕ | ೨೯,೮೦೦.೦೦ |
| ಶಾಶ್ವತ ಸಂಯೋಜನೆ ಹೊಂದಿದ ಕೋರ್ಸುಗಳಿಗೆ ವಾರ್ಷಿಕ ಶುಲ್ಕ | ೨೦,೪೭೦.೦೦ |
| ಕೋ–ಆರ್ಡಿನೇಶನ್ ಶುಲ್ಕ | ೨೯,೮೦೦.೦೦ |
| ಐದು ವರ್ಷಕ್ಕೊಮ್ಮೆ ತಪಾಸಣೆ ಮಾಡಲು ಕೊಡಬೇಕಾದ ಶುಲ್ಕ (ಶಾಶ್ವತ ಸಂಯೋಜನೆ ಪಡೆದ ಮಹಾವಿದ್ಯಾಲಯಗಳಿಗೆ) | ೧,೯೭,೮೬೦.೦೦ |

**<u>ಆ–೩.ಬಿ.ಬಿ.ಎಂ, ಬಿ.ಬಿ.ಎ, ಬಿ.ಹೆಚ್.ಎಸ್.ಸಿ, ಬಿ.ಸಿ.ಎ, ಬಿ.ಎಫ್.ಟಿ,ಬಯೋಟೆಕ್ನಾಲೊಜಿ, ಬಿ.ಎಫ್.ಎಮ್ ಮತ್ತು ಬಿ.ಎಸ್.ಡಬ್ಲ್ಯೂ ಕೋರ್ಸುಗಳ ಮಹಾವಿದ್ಯಾಲಯಗಳಿಗೆ :</u>**

| | |
|---|---|
| ಶಾಶ್ವತ ಸಂಯೋಜನೆ ಹೊಂದದ ಕೋರ್ಸುಗಳಿಗೆ ವಾರ್ಷಿಕ ಶುಲ್ಕ ಹಾಗೂ ಮುಂದುವರಿಕೆ ಶುಲ್ಕ | ೩೨,೯೨೦.೦೦ |
| ಶಾಶ್ವತ ಸಂಯೋಜನೆ ಹೊಂದಿದ ಕೋರ್ಸುಗಳಿಗೆ ವಾರ್ಷಿಕ ಶುಲ್ಕ | ೧೩,೭೨೦.೦೦ |
| ಐದು ವರ್ಷಕ್ಕೊಮ್ಮೆ ತಪಾಸಣೆ ಮಾಡಲು ಕೊಡಬೇಕಾದ ಶುಲ್ಕ (ಶಾಶ್ವತ ಸಂಯೋಜನೆ ಪಡೆದ ಮಹಾವಿದ್ಯಾಲಯಗಳಿಗೆ) | ೮೨,೪೮೦.೦೦ |

**<u>ಆ–೫.ಇತರೆ ಮಹಾವಿದ್ಯಾಲಯಗಳಿಗೆ (ಕಲಾ, ವಾಣಿಜ್ಯ ಮತ್ತು ವಿಜ್ಞಾನ) :</u>**

| | |
|---|---|
| ಶಾಶ್ವತ ಸಂಯೋಜನೆ ಹೊಂದದ ಕೋರ್ಸುಗಳಿಗೆ ವಾರ್ಷಿಕ ಶುಲ್ಕ ಹಾಗೂ ಮುಂದುವರಿಕೆ ಶುಲ್ಕ | ೨೩,೧೩೦.೦೦ |
| ಶಾಶ್ವತ ಸಂಯೋಜನೆ ಹೊಂದಿದ ಕೋರ್ಸುಗಳಿಗೆ ವಾರ್ಷಿಕ ಶುಲ್ಕ | ೮,೧೯೦.೦೦ |
| ಐದು ವರ್ಷಕ್ಕೊಮ್ಮೆ ತಪಾಸಣೆ ಮಾಡಲು ಕೊಡಬೇಕಾದ ಶುಲ್ಕ (ಶಾಶ್ವತ ಸಂಯೋಜನೆ ಪಡೆದ ಮಹಾವಿದ್ಯಾಲಯಗಳಿಗೆ) | ೫೭,೭೨೦.೦೦ |

**<u>ಆ–೬.ಇತರ ಶುಲ್ಕಗಳು :</u>**

| | |
|---|---|
| ೧. ಹೊಸ ವಿಷಯ ಶುಲ್ಕ ಹಾಲಿ ಮಹಾವಿದ್ಯಾಲಯಗಳಿಗೆ | ೮,೪೦೦.೦೦ |
| ೨. ಹೊಸ ಕೋರ್ಸು ಶುಲ್ಕ ಹಾಲಿ ಮಹಾವಿದ್ಯಾಲಯಗಳಿಗೆ | ೫೭,೭೨೦.೦೦ |
| ೩. ಮರು ತಪಾಸಣಾ ಶುಲ್ಕ | ೩೯,೭೧೦.೦೦ |

೪. ಕಾಲೇಜು ವರ್ಗಾವಣೆ/ ಸ್ಥಳಾಂತರ ಶುಲ್ಕ/ ಕಾಲೇಜು ಮಿಶ್ರಣ ಶುಲ್ಕ ೫೭,೭೨೦.೦೦
೫. ಸಂಸ್ಥೆ/ಕಾಲೇಜು ಹೆಸರು ಬದಲಾವಣೆ ಶುಲ್ಕ ೪೫,೦೧೦.೦೦
೬. ಪ್ರತಿ ವರ್ಷಕ್ಕೆ ಕೋರ್ಸಿನ ವಿಸ್ತರಣೆ ಶುಲ್ಕ ೧೧,೬೭೦.೦೦

೭. ಪತಿ ವಿಷಯಕ್ಕೆ ವಿಸ್ತರಣೆ ಶುಲ್ಕ
೧. ಪತಿ ವಿಷಯಕ್ಕೆ ಮುಂದುವರಿಕೆ ಸಂಯೋಜನೆ ಶುಲ್ಕ ೪,೧೦೦.೦೦
೨. ಪ್ರತಿ ವಿಷಯಕ್ಕೆ ಶಾಶ್ವತ ಸಂಯೋಜನೆ ಶುಲ್ಕ ೨,೦೬೦.೦೦
೩. ಪ್ರತಿ ವಿಷಯಕ್ಕೆ ಶಾಶ್ವತ ನವೀಕರಣ ಶುಲ್ಕ ೧೦,೨೫೦.೦

**ಇ. ಪ್ರವೇಶ ಸಂಖ್ಯೆ ಹೆಚ್ಚಳ ಶುಲ್ಕ ಈ ಕೆಳಗಿನಂತೆ ನಿಗದಿಪಡಿಸಿದೆ :**

| ಅನಂ | ಕೋರ್ಸುಗಳು | ವಿದ್ಯಾರ್ಥಿನಿಯರ ಪ್ರಮಾಣ | ನಿಗದಿಪಡಿಸಿದ ಶುಲ್ಕ |
|---|---|---|---|
| ೦೧ | ಬಿ.ಎ/ಬಿಎಸ್ಸಿ/ಬಿ.ಕಾಂ/ADAPM/DFD&BM | ೧ ರಿಂದ ೬೦<br>೬೧ ರಿಂದ ೧೨೦ | ೯,೨೩೦.೦೦<br>೧೫,೩೮೦.೦೦ |
| ೦೨ | ಬಿ.ಎಸ್ ಡಬ್ಲ್ಯೂ | ೧ ರಿಂದ ೬೦<br>೬೧ ರಿಂದ ೧೨೦ | ೧೨,೩೦೦.೦೦<br>೧೮,೪೫೦.೦೦ |
| ೦೩ | ಬಿಬಿಎಂ/ಬಿಸಿಎ/ಬಿಎಸ್ಸಿಹೋಮಸೈನ್ಸ್/ಬಿಎಫ್‌ಟಿ/BFM | ೧ ರಿಂದ ೬೦<br>೬೧ ರಿಂದ ೧೨೦ | ೧೫,೩೮೦.೦೦<br>೧೮,೪೫೦.೦೦ |

**ಈ. ಶಾಶ್ವತ ಸಂಲಗ್ನತೆ ಮಂಜೂರಾತಿಗಾಗಿ :**

| ಕ್ರ.ಸಂ | ಕೋರ್ಸು | ಒಟ್ಟು ಶುಲ್ಕ ರೂ. |
|---|---|---|
| ೧ | ಬಿ.ಎಡ್ | ೧,೫೪,೯೬೦.೦೦ |
| ೨ | ಕಲಾ | ೭೭,೫೮೦.೦೦ |
| ೩ | ವಿಜ್ಞಾನ | ೭೭,೫೮೦.೦೦ |
| ೪ | ವಾಣಿಜ್ಯ | ೭೭,೫೮೦.೦೦ |
| ೫ | ಬಿ.ಬಿ.ಎಂ/ಬಿ.ಬಿ.ಎ | ೧,೭೨,೫೮೦.೦೦ |
| ೬ | ಬಿ.ಸಿ.ಎ/ಬಿಎಸ್‌ಡಬ್ಲ್ಯೂ/ಬಿಎಫ್‌ಟಿ | ೧,೭೨,೫೮೦.೦೦ |
| ೭ | ಬಿ.ಎಸ್ಸಿ ಬಯೋಟೆಕ್ನಾಲೋಜಿ/ಬಿ.ಹೆಚ್.ಎಸ್ಸಿ | ೭೭,೫೮೦.೦೦ |

ಪತ್ರ ವ್ಯವಹಾರಕ್ಕೆ ಖಾಯಂ ವಿಳಾಸ ಚಾಲ್ತಿಯಲ್ಲಿರುವ ವೆಬ್ ಸೈಟ್ ವಿಳಾಸ/ದೂರವಾಣಿ ಸಂಖ್ಯೆ/ಮೊಬೈಲ್ ಸಂಖ್ಯೆಗಳನ್ನು ನೀಡತಕ್ಕದ್ದು. ನೀಡಿದ ವಿಳಾಸದ ಮೇಲೆ ಪತ್ರ ವ್ಯವಹಾರ ಮಾಡಿದಾಗ ಪತ್ರ ತಲುಪದೇ ಇದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ಸಂಘ ಸಂಸ್ಥೆಯ ಆಡಳಿತ ಮಂಡಳಿಯೇ ಹೊಣೆಗಾರರೆಂದು ಈ ಮೂಲಕ ನಿಖರವಾಗಿ ತಿಳಿಸಲಾಗಿದೆ. ಯಾವುದೇ ಸಂಸ್ಥೆಯವರು ಸಂಲಗ್ನತೆಗಾಗಿ ಪಾವತಿ ಮಾಡಿದ ಶುಲ್ಕವನ್ನು ಯಾವ ಕಾರಣಕ್ಕೂ ಮರು ಸಂದಾಯ ಅಥವಾ ಮುಂದಿನ ವರ್ಷಕ್ಕೆ ಹೊಂದಾಣಿಕೆ ಮಾಡಲು ಬರುವುದಿಲ್ಲವೆಂದು ತಿಳಿಸಲಾಗಿದೆ.

## ಸ್ನಾತಕೋತ್ತರ ಕೋರ್ಸುಗಳು (PG)

೨೦೧೮-೧೯ ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕೋತ್ತರ ಕೋರ್ಸಿನ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಈ ಕೆಳಗೆ ನಮೂದಿಸಿದ ಮಾಹಿತಿಗಳ ದಾಖಲೆಗಳನ್ನು ಸಲ್ಲಿಸಬೇಕು.

೧. ಹಿಂದಿನ ವರ್ಷದಲ್ಲಿ ಚಾಲ್ತಿಯಲ್ಲಿದ್ದ ಕೋರ್ಸುಗಳ ಹಾಗೂ ವಿಷಯಗಳ ಪಟ್ಟಿ ಲಗತ್ತಿಸಬೇಕು.
೨. ಖಾಯಂ ಸಂಲಗ್ನತೆ ಮಂಜೂರಾತಿಯ ಅಧಿಸೂಚನೆಯ ಪ್ರತಿ ಲಗತ್ತಿಸತಕ್ಕದ್ದು.
೩. ಯಾವುದೇ ಹೊಸ ಕೋರ್ಸನ್ನು ಸಂಯೋಜನೆ ಕೋರಿ ಸಲ್ಲಿಸಲಾಗುವ ಅರ್ಜಿಯಲ್ಲಿಯೇ ವಿವರವನ್ನು ತುಂಬಿ ಸಲ್ಲಿಸಬೇಕು. ಸಮಿತಿ ಭೇಟಿ ನೀಡಿದ ಸಂದರ್ಭದಲ್ಲಿ ಅಥವಾ ನಂತರ ಕೋರಿಕೆ ಸಲ್ಲಿಸಿದಲ್ಲಿ ಅಂತಹ ಕೋರಿಕೆಯನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
೪. ಸಂಯೋಜನಾ ಅರ್ಜಿಯ ಜೊತೆಯಲ್ಲಿ ಲಗತ್ತಿಸಿದ ಅನುಬಂಧದ ಪ್ರಕಾರ ಎಲ್ಲಾ ಮಾಹಿತಿಗಳನ್ನು ಪೂರೈಸಬೇಕು ಈ ಹೊಣೆ ಸಂಬಂಧಿಸಿದ ಪ್ರಾಂಶುಪಾಲರು/ಸಂಸ್ಥೆಯ/ಸಂಘದ ಆಡಳಿತ ಮಂಡಳಿಗೆ ಸಂಬಂಧಪಟ್ಟಿದೆ.

೫. ಸರ್ಕಾರಿ ಕಾಲೇಜಿನವರು ಹೊಸ ಸ್ನಾತಕೋತ್ತರ ಕೋರ್ಸು ಕೋರಿ ಅರ್ಜಿ ಸಲ್ಲಿಸಬೇಕಾದಲ್ಲಿ ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆದಿರಬೇಕು ಮತ್ತು ಸರ್ಕಾರದಿಂದ ಮಂಜೂರಾದ ಪ್ರತಿಯನ್ನು ಲಗತ್ತಿಸತಕ್ಕದ್ದು. ಇಲ್ಲದಿದ್ದಲ್ಲಿ ಅಂತಹ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

೬. ಸರ್ಕಾರದ ನಿಯಮದಂತೆ ಸರ್ಕಾರಿ ಕಾಲೇಜಿನವರು ಸಂಯೋಜನೆಗಾಗಿ ಯಾವುದೇ ಶುಲ್ಕವನ್ನು ಪಾವತಿಸುವಂತಿಲ್ಲ. ಆದರೆ ನಿಗದಿತ ಸಮಯದಲ್ಲಿ ಸೂಕ್ತ ಅರ್ಜಿಯನ್ನು ಸಂಬಂಧಪಟ್ಟ ಮಾಹಿತಿಯೊಡನೆ ಆರು ಪ್ರತಿಯಲ್ಲಿ ಅರ್ಜಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳೇ ನೇರ ಹೊಣೆಗಾರರಾಗಿರುತ್ತಾರೆ.

೭. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳಿಂದ ನಡೆಸುತ್ತಿರುವ ಕಾಲೇಜಿನವರು ನಿಯಮಾನುಸಾರ ಶೇಕಡಾ ೫೦ ರಷ್ಟು ಸಂಯೋಜನಾ ಶುಲ್ಕವನ್ನು ಪಾವತಿ ಮಾಡಲು ತಿಳಿಸಲಾಗಿದೆ. (SC/ST ಸಂಸ್ಥೆಯವರಿಗೆ ಸಂಯೋಜನಾ ಶುಲ್ಕಗಳಲ್ಲಿ ಮಾತ್ರ ಪ್ರತಿಶತ ೫೦% ರಷ್ಟು ರಿಯಾಯತಿ ಇರುತ್ತದೆ). ಅರ್ಜಿ ಶುಲ್ಕ, ಸೇವಾ ಶುಲ್ಕ ಹಾಗೂ ದಂಡ ಶುಲ್ಕಕ್ಕೆ ರಿಯಾಯಿತಿ ಇರುವುದಿಲ್ಲ. ಆದುದರಿಂದ ಅಂತಹ ಕಾಲೇಜಿನವರೂ ಕೂಡ ನಿಗದಿತ ನಮೂನೆಯಲ್ಲಿ ನಿಗದಿಪಡಿಸಿರುವ ಕೊನೆಯ ದಿನದೊಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು, ಇಲ್ಲದಿದ್ದರೆ ದಂಡ ಶುಲ್ಕವನ್ನು ಪಾವತಿ ಮಾಡಬೇಕಾಗುತ್ತದೆ.

೮. ಅಧಿಸೂಚನೆಯಲ್ಲಿರುವ ಕೋರ್ಸುಗಳಿಗೆ ಮಾತ್ರ ಅರ್ಜಿಯನ್ನು ಸಲ್ಲಿಸಬೇಕು. ಹಾಗೇನಾದರೂ ಅಧಿಸೂಚನೆಯಲ್ಲಿಲ್ಲದ ಕೋರ್ಸುಗಳಿಗೆ ಅರ್ಜಿಯನ್ನು ಸಲ್ಲಿಸಿದಲ್ಲಿ ಆಗುವ ಯಾವುದೇ ತೊಂದರೆಗಳಿಗೆ ಕಾಲೇಜುಗಳ ಪ್ರಾಂಶುಪಾಲರುಗಳು ನೇರ ಹೊಣೆಗಾರರಾಗುತ್ತಾರೆಯೇ ವಿನಃ ಯಾವುದೇ ಕಾರಣಕ್ಕೂ ವಿಶ್ವವಿದ್ಯಾನಿಲಯವು ಹೊಣೆಯಾಗುವುದಿಲ್ಲ.

೯. **ಸ್ನಾತಕೋತ್ತರ ಕೋರ್ಸುಗಳಿಗೆ ಅರ್ಜಿ ಸಲ್ಲಿಸುವವರು ಉತ್ತಮ ಶೈಕ್ಷಣಿಕ ವ್ಯವಸ್ಥೆ ಮತ್ತು ಶಾಶ್ವತ ಸಂಯೋಜನೆಯನ್ನು ಪಡೆದಿರಬೇಕು ಅಥವಾ ನ್ಯಾಕ್ ಮಾನ್ಯತೆ ಪಡೆದ ಹಾಗೂ ಕಡ್ಡಾಯವಾಗಿ ಸಂಬಂಧಪಟ್ಟ ಕೋರ್ಸುಗಳ ಕನಿಷ್ಠ ೦೫ ವರ್ಷ ಸ್ನಾತಕ ಕೋರ್ಸುಗಳನ್ನು ನಡೆಸಿದ್ದರ ಅನುಭವ ಹೊಂದಿರಬೇಕು.**

೧೦. ಸಂಯೋಜನೆ ಮಂಜೂರಾತಿಗೆ ಮುಂಚೆ ಸ್ನಾತಕೋತ್ತರ ಕೋರ್ಸುಗಳ ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ಕನಿಷ್ಠ ೦೪ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಬೇಕು. ಅದರಲ್ಲಿ ೦೨ ಉಪನ್ಯಾಸಕರು ಪಿ.ಎಚ್.ಡಿ ದ್ಯಾರ್ಹತೆ ಹೊಂದಿರತಕ್ಕದ್ದು ಮತ್ತು ಅವರುಗಳಿಗೆ UGC ನಿಯಮಾನುಸಾರ ಸಂಬಳ ನೀಡತಕ್ಕದ್ದು.

೧೧. ಪೂರ್ಣ ಮಾಹಿತಿಯನ್ನು ನೀಡದ ಸಂಯೋಜನಾ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ ತಿರಸ್ಕರಿಸಿ ಹಿಂದಿರುಗಿಸಲಾಗುವದು ಮತ್ತು ಈ ವಿಷಯದಲ್ಲಿ ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.

೧೨. ಸರ್ಕಾರದ ಪತ್ರ ಸಂಖ್ಯೆ: ಇಡಿ ೭೬ ಯುಬಿವಿ ೨೦೧೧ ದಿನಾಂಕ:೧೭-೦೫-೨೦೧೧ ರನ್ವಯ ೦೫ ವರ್ಷಗಳ ವರೆಗೆ ಸಂಯೋಜನೆಯನ್ನು ಹೊಂದಿರುವ ಎಲ್ಲ ಮಹಿಳಾ ಮಹಾವಿದ್ಯಾಲಯಗಳು ಉತ್ತಮ ಶೈಕ್ಷಣಿಕ ಗುಣಮಟ್ಟ ಹೊಂದಿರಬೇಕು. ಹಾಗೂ NAAC ದಿಂದ ಕನಿಷ್ಠ C++ ಗ್ರೇಡ ಕಡ್ಡಾಯವಾಗಿ ಪಡೆದ ಕಾಲೇಜಿನವರು ಮಾತ್ರ ಸ್ನಾತಕೋತ್ತರ ಕೋರ್ಸಿಗೆ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

**ವಿಶೇಷ ಸೂಚನೆ :**

೧) **ಒಮ್ಮೆ ಸಂದಾಯ ಮಾಡಿದ ಸಂಯೋಜನಾ ಕ್ವಾಲಿಫಾಯಿಂಗ ಶುಲ್ಕವನ್ನು ಯಾವುದೇ ಕಾರಣಕ್ಕೆ ಮರುಪಾವತಿ ಅಥವಾ ಮರುಹೊಂದಾಣಿಕೆ ಮಾಡಲಾಗುವುದಿಲ್ಲ.**

೨) ಭರ್ತಿ ಮಾಡಿದ ನಿಗದಿತ ಅರ್ಜಿಯನ್ನು ಸಂಬಂಧಿಸಿದ ಸಂಯೋಜನೆ ಶುಲ್ಕದ (ಕ್ವಾಲಿಫಾಯಿಂಗ ಶುಲ್ಕ ಮತ್ತು ರೆಗ್ಯೂಲರ ತಪಾಸಣೆ ಶುಲ್ಕ) ಡಿಡಿಯೊಂದಿಗೆ ನಿಗದಿತ ದಿನಾಂಕದಲ್ಲಿ ಕಛೇರಿ ವೇಳೆಯಲ್ಲಿ ಕುಲಸಚಿವರ ಕಛೇರಿಯಲ್ಲಿ ಸಲ್ಲಿಸತಕ್ಕದ್ದು.

೩) ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸು ಪ್ರಾರಂಭಿಸಲು ಪ್ರಿ- ಕ್ವಾಲಿಫಿಕೇಶನ್ ಮತ್ತು ರೆಗ್ಯೂಲರ ಅರ್ಜಿ ಸಲ್ಲಿಸಬೇಕಾಗುವುದು. ಈ ಅರ್ಜಿ ನಮೂನೆಗಳನ್ನು ರೂ. ೩,೦೭೦.೦೦ (ರೂಪಾಯಿ ಮೂರ ಸಾವಿರದ ಎಪ್ಪತ್ತು ಮಾತ್ರ) ಗಳನ್ನು ಸಿಂಡಿಕೇಟ ಬ್ಯಾಂಕಿನಲ್ಲಿ ಪಾವತಿ ಮಾಡಿ ಚಲನದ ಮೂರನೇ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ, ಅಥವಾ ಡಿ ಡಿ/NEFT ಮುಖಾಂತರ ಪಾವತಿಸಿ ಕಛೇರಿಯ ವೇಳೆಯಲ್ಲಿ ಕೊಟ್ಟು ಅರ್ಜಿ ನಮೂನೆ ಪಡೆಯಬಹುದು. .( **NEFT A/C No.08632200000959. IFSC Code No. SYNB0000863** ) ಭರ್ತಿ ಮಾಡಿದ ಈ ಅರ್ಜಿಯನ್ನು ೦೬ ಪ್ರತಿಗಳಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ ಮತ್ತು ಕೆಳಗೆ ನಮೂದಿಸಿದ ಸಂಬಂಧಪಟ್ಟ ವಿಷಯಕ್ಕೆ ಪ್ರತ್ಯೇಕವಾಗಿ ಶುಲ್ಕದ ಹಣವನ್ನು ಆರ್ಥಿಕ ಅಧಿಕಾರಿಗಳು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,

ವಿಜಯಪುರ. ಇವರ ಹೆಸರಿಗೆ ಪಾವತಿ ಮಾಡಿ ನಿಗದಿತ ದಿನಾಂಕದೊಳಗೆ ಕಛೇರಿಗೆ ತಲುಪಿಸಬೇಕು. ಅರ್ಜಿಯಲ್ಲಿ ತಿಳಿಸಿದ ಸ್ನಾತಕೋತ್ತರ ವಿಷಯ (ವಿಭಾಗ ಪ್ರಾರಂಭಿಸಲು) ಇರುವ ಸೌಲಭ್ಯಗಳ ತಪಾಸಣೆ ಮಾಡಲು ಪ್ರಿ- ಕ್ವಾಲಿಫಿಕೇಶನ್ ತಜ್ಞರ ಸಮಿತಿ ಕಳುಹಿಸಲಾಗುವುದು. ಈ ಸಮಿತಿಯು ಸದರಿ ಕೋರ್ಸು ಪ್ರಾರಂಭಿಸಲು ಶಿಫಾರಸ್ಸು ಮಾಡಿದ್ದನ್ನು ಒಪ್ಪಿಗೆಯಾದಲ್ಲಿ ಸದರಿ ಕೋರ್ಸಿನ ಸಂಯೋಜನೆ ಕುರಿತು ಮುಂದಿನ ಕ್ರಮ ಕೈಗೊಳ್ಳಲಾಗುವುದು. **ಒಂದು ವೇಳೆ ಸಂಯೋಜನೆಗೆ ಶಿಫಾರಸ್ಸು ಮಾಡದಿದ್ದಲ್ಲಿ ತಾವು ಭರಣಾ ಮಾಡಿದ ಮೊತ್ತದಲ್ಲಿ ರೂ. ೪೬,೧೨೦.೦೦ ಗಳನ್ನು (ತಪಾಸಣೆ ಶುಲ್ಕ) ಕಟಾಯಿಸಿ ಉಳಿದ ಮೊತ್ತವನ್ನು ಮರಳಿಸಲಾಗುವುದು.**

## -: ಸಂಲಗ್ನತೆಯ ಶುಲ್ಕ ವಿವರಗಳು :-

| ಅ ಹೊಸ ಸಂಲಗ್ನತೆಗಾಗಿ | ಸಂಯೋಜನಾ ಶುಲ್ಕ ರೂ | LIC Fee (Non refundable) | Total |
|---|---|---|---|
| ೧) Kannada(M.A) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೨) English(M.A) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೩) Hindi(M.A) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೪) Urdu(M.A) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೫) Poltical Science (M.A) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೬) History (M.A) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೭) Sociology(M.A) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೮) Economics (M.A) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೯) Women Studies (M A) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೧೦) Social Work (MSW) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೧೧) Library & Information Science | ೨,೩೦,೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೧೨) Journalism | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೧೩) Physics (M.Sc) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೧೪) Chemistry (M.Sc) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೧೫) Mathematics (M.Sc) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೧೬) Computer Science | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೧೭) Bio-informatics | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೧೮) Bio-technology | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೧೯) Botany | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೨೦) Zoology | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೨೧) Electronics | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೨೨) Pharmaceutial Chemistry | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೨೩) Food Processing | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೨೪) Statistics | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೨೫) Micro-Biology (MSc) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೨೬) Biochemistry (MSc) | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೨೭) M.Com | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೨೮) MBA | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೨೯) MCA | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೩೦) M.Ed | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |
| ೩೧) Music (M.A) | ೧,೭೨,೯೫೦.೦೦ | ೩೪,೫೯೦.೦೦ | ೨,೦೭,೫೪೦.೦೦ |
| ೩೨) MFM | ೨,೩೦೬೦೦.೦೦ | ೪೬,೧೨೦.೦೦ | ೨,೭೬,೭೨೦.೦೦ |

| | | | | |
|---|---|---|---|---|
| ೩೩) | PGDiploma in Fashion Desining and Boutique Management | ೧,೭೨,೯೫೦.೦೦ | ೩೪,೫೯೦.೦೦ | ೨,೦೭.೫೪೦.೦೦ |

<u>**ಸೂಚನೆ:** ಮೇಲೆ ನಮೂದಿಸಿದ ಸಂಲಗ್ನತೆಯ ಶುಲ್ಕ ವನ್ನು ಅರ್ಜಿಯ ಜೊತೆಗೆ ಲಗತ್ತಿಸಿ ಸಲ್ಲಿಸತಕ್ಕದ್ದು. ಒಂದಕ್ಕಿಂತ ಹೆಚ್ಚಿಗೆ ವಿಷಯಗಳಿಗೆ ಅರ್ಜಿ ಸಲ್ಲಿಸುವವರು ಪ್ರತಿ ವಿಷಯಕ್ಕೆ ಪ್ರತ್ಯೇಕ ಅರ್ಜಿ ಮತ್ತು ಶುಲ್ಕದೊಂದಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.</u>

**<u>ಠೇವಣಿ ಹಣ :</u>**

**ಎಂ.ಎ/ಎಂ.ಎಸ್‌ಸಿ/ಎಂ.ಕಾಂ :–ರೂ. ೧೨,೨೯,೮೪೦.೦೦.**

**ಎಂ.ಎ ಮ್ಯೂಜಿಕ್/MFM/PGDFD&BM :ರೂ. ೯,೨೨,೩೮೦.೦೦.**

**<u>ಠೇವಣಿ ಹಣ ಎರಡು ವರ್ಷ ಮೂರು ಕಂತಿಗಳಲ್ಲಿ ಸಂದಾಯ ಮಡಲು ಅವಕಾಶವಿದೆ.</u>**

ಠೇವಣಿ ಹಣವನ್ನು ಕಡ್ಡಾಯವಾಗಿ ಆರ್ಥಿಕ ಅಧಿಕಾರಿಗಳು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪೂರ ಇವರ ಹೆಸರಿನಲ್ಲಿ ಇಡತಕ್ಕದ್ದು. ಯಾವುದೇ ಕಾಲೇಜುಗಳು ಮೇಲೆ ನಮೂದಿಸಿದ ಠೇವಣಿಯನ್ನು ಇಡದಿದ್ದಲ್ಲಿ ಅಥವಾ ಅದಕ್ಕೆ ತತ್ಸಮಾನವಾದ ಎಂಡೋಮೆಂಟ್ ಶುಲ್ಕ ಒಂದು ಲಕ್ಷಕ್ಕೆ ರೂ. **೧೮,೬೮೦.೦೦** (ರೂಪಾಯಿ ಹದಿನೆಟ್ಟು ಸಾವಿರದ ಆರ ನೂರಾ ಎಂಬತ್ತು ಮಾತ್ರ) ಯಂತೆ ಪ್ರತಿ ಸಾಲಿಗೆ ಸಲ್ಲಿಸಬೇಕಾಗುತ್ತದೆ. ಠೇವಣಿ ಹಣ/ಎಂಡೋಮೆಂಟ ಶುಲ್ಕ ಸಂದಾಯ ಮಾಡಿದ ನಂತರ ಸಂಯೋಜನೆ ಅಧಿಸೂಚನೆ ಹೊರಡಿಸಲಾಗುದು.

**<u>ಸೂಚನೆ:</u>** ಠೇವಣಿ ಹಣ ಸಂದಾಯ ಮಾಡದ ಮಹಾವಿದ್ಯಾಲಯಗಳು ಸಂಯೋಜನೆಯ ಪ್ರಸ್ತಾವನೆ ಜೊತೆಗೆ ಠೇವಣಿ ಹಣವನ್ನು ಸಂದಾಯ ಮಾಡಬೇಕು.

ಪದವಿ ಮಹಾವಿದ್ಯಾಲಯಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವಾಗ ಅಂತಹ ಕಾಲೇಜುಗಳು ಈ ಕೆಳಕಂಡ ಮಾರ್ಗಸೂಚಿಗಳ ಅನುಸಾರ ಅರ್ಜಿಗಳನ್ನು/ಪ್ರಸ್ತಾವನೆಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.

Guidelines for promoting research in the colleges which offer PG programmes in affiliated colleges (Proceedings of the IUB meeting dated : 27-05-2006 subject No:03) (Govt. letter No: ED 107 URC 2006 Dated: 21-08-2006)

1) **Research facilities:** The colleges applying for PG Programmes shall also create separate research facilities for each PG programme. Fresh/ Renewal of affiliation for the PG Programme shall not be granted if any of the following condition is not fulfilled in the respective year of affiliation.
2) **While considering grant of fresh affiliation:** A separate hall of atleast 40x30 shall be earmarked for the Post-Graduate Library exclusively for the use of scholars and Ph.D Students. The scholars shall have open access in the Library. Each scholar shall be provided with a cubicle for her study and in any event there shall not be less than four cubicles in the room. Each cubicle shall be fitted with light, fan etc. There shall be atleat two computers with internet, printer etc in the hall for exclusive use by the scholars.

The P G Library shall subscribe for atleast 10 standard research journals pertaining to each PG Programme out of which atleast 02 shall be foreign journals.

If the PG Programme involves practicals in addition to the Library facilities there shall be a separate research laboratory of atleast 60x40 having standard lab furniture, gas connection, distilled water and de ionized water supply exclusively for conducting research.

I) **In the second year of affiliation**: The faculty members of the PG Departments shall engage themselves in research in the respective areas of specialization and

also strive to generate funds for research either from the Govt. departments such as UGC, ICHR, ICSSR, DBI,DST, DOE or sponsored projects/ endowments from industries /public/philanthropists. If sufficient evidence of initiating research in the department is not forthoming affiliation shall not be renewed.

If the PG Programme involves practicals basic equipments for analytical/ visual/ electronic etc as the case may be shall be purchased and installed in the research lab. Separate requirements such as Animal/ Plant, Tissue culture lab (for Bio-Technology) Botanic Garden/ Animal House(for Biological Sciences) Culture Room (for Microbiology) shall also be provided for Research.

II) **In the third and subsequent years**. Affiliation shall be continued only if there are publications of atleast two books or research articles in the standard subject journals. For this purpose guides/ Text books of degree and below level and popular articles published in news papers or popular magazines shall be excluded.

III) If sufficient funds are not forthcoming from outside for updating the above facilities the management shall invest from out of its own resources.

IV) **However, in the fifth year of Affiliation**, the college shall get recognition/ affiliation to its Ph.D programme from the concerned University.

**3) Before granting fresh affiliation** the University shall make sure that four full time core faculty (out of which atleast two faculty members with Ph.D / Research degree) is appointed by the college and their pay scale and service conditions are determined as per the rules of concerned University.

ಈ ಮೇಲ್ಕಾಣಿಸಿದ ಮಾರ್ಗಸೂಚಿಗಳ ಅನುಸಾರ ಎಲ್ಲ ದಾಖಲಾತಿಗಳನ್ನು, ಆರ್ಥಿಕ ಸುಭದ್ರತೆ ಮತ್ತು ಮಾಹಿತಿಯನ್ನು ಒದಗಿಸತಕ್ಕದ್ದು. ಯಾವುದೇ ಸಂಸ್ಥೆಯವರು ಸಂಲಗ್ನತೆಗಾಗಿ (ಪ್ರಿ ಕಾಲಿಫಾಯಿಂಗ) ಪಾವತಿ ಮಾಡಿದ ಶುಲ್ಕವನ್ನು ಯಾವ ಕಾರಣಕ್ಕೂ ಮರು ಸಂದಾಯ ಅಥವಾ ಮುಂದಿನ ವರ್ಷಕ್ಕೆ ಹೊಂದಾಣಿಕೆ ಮಾಡಲು ಬರುವುದಿಲ್ಲವೆಂದು ಈ ಮೂಲಕತಿಳಿಸಲಾಗಿದೆ.

ಸ್ನಾತಕೋತ್ತರ ಕೋರ್ಸುಗಳಿಗೆ ವಿದ್ಯಾರ್ಥಿನಿಯರ ಪ್ರಮಾಣ ಹೆಚ್ಚಿಸಲು ಸರ್ಕಾರದ ಅನುಮತಿ ಅವಶ್ಯವಿದ್ದು. ಪ್ರತ್ಯೇಕ ಅರ್ಜಿಯ ಜೊತೆಗೆ ಮನವಿ ಸಲ್ಲಿಸಬೇಕು. ತಪಾಸಣಾ ಸಮಿತಿಯು ಶಿಫಾರಸ್ಸು ಮಾಡಿದಲ್ಲಿ ಮನವಿಯನ್ನು ಸರ್ಕಾರಕ್ಕೆ ಕಳುಹಿಸಿ ಅನುಮತಿ ಪಡೆದ ನಂತರ ಪರಿಗಣಿಸಲಾಗುವುದು.

| | |
|---|---|
| **೧ .ಮುಂದುವರಿಕೆ ಶುಲ್ಕ** | **ರೂ. ೧೮,೬೧೦.೦೦** |
| **೨. ಕೋರ್ಸು ವಿಸ್ತರಣೆ ಶುಲ್ಕ** | **ರೂ. ೧೧,೬೭೦.೦೦** |
| **೩. ಪ್ರವೇಶ ಸಂಖ್ಯೆ ಹೆಚ್ಚಳ ಶುಲ್ಕ ಪ್ರತಿ ಒಂದು ಸೀಟಿಗೆ** | **ರೂ.೧೪,೬೨೦.೦೦** |

**ಸಹಿ/-**

**ಕುಲಸಚಿವರು**

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ,

**ಗೆ,**

**ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ, ಅಧೀನಕ್ಕೊಳಪಟ್ಟ ಎಲ್ಲಾ ಮಹಿಳಾ ಮಹಾವಿದ್ಯಾಲಯಗಳ, ಪ್ರಾಂಶುಪಾಲರಿಗೆ.**

**ಪ್ರತಿಗಳು:**

1) ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ೫ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು– ೫೬೦ ೦೦೧.
2) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3) ಕುಲಸಚಿವರು, ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ.
4) ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5) ಕಾರ್ಯದರ್ಶಿಗಳು, ಎ.ಐ.ಸಿ.ಟಿ.ಇ ಸೌತ ವೆಸ್ಟರ್ನ, ರಿಜಿನಲ್ ಆಫೀಸ್, ವಿಶ್ವವಿದ್ಯಾಲಯ ಆವರಣ,ಪ್ಯಾಲೇಸ್ ರಸ್ತೆ,ಬೆಂಗಳೂರು.
6) ಕುಲಸಚಿವರು (ಮೌಲ್ಯಮಾಪನ), ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.
7) ಆರ್ಥಿಕ ಅಧಿಕಾರಿಗಳು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.
8) ಗ್ರಂಥಪಾಲಕರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.
9) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಗುಲಬರ್ಗಾ ಹಾಗೂ ಧಾರವಾಡ.
10) ಉಪ ಕುಲಸಚಿವರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.
11) ನಿರ್ದೇಶಕರು ವಿದ್ಯಾರ್ಥಿ ಕ್ಷೇಮಪಾಲನಾ ಘಟಕ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.
12) ನಿರ್ದೇಶಕರು,ಸ್ನಾತಕೋತ್ತರ ಅಧ್ಯಯನ ಕೇಂದ್ರ ಮಂಡ್ಯ/ಸಿಂಧನೂರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.
13) ನಿರ್ದೇಶಕರು, ICT Cell ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.ಇವರಿಗೆ ಸಂಯೋಜನಾ ಅಧಿಸೂಚನೆಯನ್ನು ವಿ.ವಿ ವೆಬ್ ಸೈಟ್‌ನಲ್ಲಿ ಅಳವಡಿಸಲು ಸೂಚಿಸಲಗಿದ್ದೆ.
14) ಉಪನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಿಜಯಪುರ (೨೦ ಪ್ರತಿಗಳು).
15) ವ್ಯವಸ್ಥಾಪಕರು, ಸಿಂಡಿಕೇಟ ಬ್ಯಾಂಕ್, ವಿವಿ ಆವರಣ ತೊರವಿ
16) ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.
17) ಕುಲಸಚಿವರ ಆಪ್ತ ಸಹಾಯಕರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.
18) ಕಛೇರಿ ಪ್ರತಿ.
19) ಸೂಚನಾ ಫಲಕಕ್ಕೆ.